# 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯ್ಯಾಧೀಶರು (ವಿಶೇಷ ನ್ಯಾಯಾಧೀಶರು), ನ್ಯಾಯಾಲಯ, ಬಾಗಲಕೋಟೆ

ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ.141/2023

ಫಿರ್ಯಾದಿದಾರರು: ಕರ್ನಾಟಕ ಸರಕಾರ ಪರ ಬೀಳಗಿ ಪೊಲೀಸ್ ಠಾಣೆ

::: **ವಿರುದ್ಧ** :::

ಆರೋಪಿ:

1) ನಾಗರಾಜ ಅಲಿಯಾಸ್ ಪರಸು ತಂದೆ ಹೊಳೆಬಸಪ್ಪ ಬೀಳಗಿ ಅಲಿಯಾಸ್ ಯಂಡಿಗೇರಿ,
ವ: 32 ವರ್ಷ, ಉ: ಕೂಲಿ ಕೆಲಸ
ಸಾ: ಅನಗವಾಡಿ ಆರ್. ಸಿ
ತಾ:: ಬೀಳಗಿ, ಜಿ:: ಬಾಗಲಕೋಟ.

2) ವಿಠ್ಠಲ್ ತಂದೆ ಗಿರಿಯಪ್ಪ ನೇಲಗಿ,
ವ: 24 ವರ್ಷ, ಉ: ಕೂಲಿ ಕೆಲಸ,
ಸಾ: ಬಿಲ್ ಕೆರೂರ
ಜಿ:: ಬಾಗಲಕೋಟ.

* * * *

## ಆರೋಪಿತನ ಹೇಳಿಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ

ಪ್ರಶ್ನೆ.1 :- ಅಭಿಯೋಜನ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರ ಆ-1 - ಕೇಳಿದ್ದೇನೆ.
ಆ-2 - ಕೇಳಿದ್ದೇನೆ.

ಪ್ರಶ್ನೆ.2 :- ಫ್ರಾಸಾ.1– ಬಾಬು, ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ಚಾಸಾ.10 ಅವರ ತಂಗಿ ಮತ್ತು ಚಾಸಾ.11 ಅವರ ತಾಯಿಯಾಗಬೇಕು, ಘಟನೆಯಾಗುವ ಪೂರ್ವದಲ್ಲಿ ಚಾಸಾ.10 ಅವರ ತಂಗಿಯ ಪೋಟೋವನ್ನು 1 ನೇ ಆರೋಪಿ ಇನಸ್ಟಾಗ್ರಾಂನಲ್ಲಿ ಹಾಕಿದ್ದರು. ಪೋನ್ ನೋಡಿದಾಗ ಆ ವಿಷಯ ಗೊತ್ತಾಗಿದ್ದು, ನಂತರ ಊರಿನ ಹಿರಿಯರಿಗೆ ವಿಷಯ ತಿಳಿಸಿ ಆರೋಪಿಗೆ ಬುದ್ಧಿವಾದ ಹೇಳುವಂತೆ ತಿಳಿಸಿದ್ದು, 8–10 ದಿನಗಳ

N.H Bilagi
V.g. Nelagi

KMD
5/6/26

ನಂತರ ಪುನಃ ಇನಸ್ಟಾಗ್ರಾಂನಲ್ಲಿ ಚಾಸಾ 10 ರ ಪೋಟೋ ಹಾಕಿದ್ದು, ದಿನಾಂಕಃ 14.09.2023 ರಂದು ರಾತ್ರಿ 8.30 ಗಂಟೆಗೆ ಸದರಿ ವಿಷಯವನ್ನು ಅವರು ಮತ್ತು ಅವರ ತಾಯಿ ಸೇರಿ 1 ನೇ ಆರೋಪಿ ಮನೆಗೆ ಹೋಗಿ ಅವರ ತಂದೆಗೆ ಹೇಳಿದ್ದರು, ಆಗ ಅವರ ತಂದೆ 1 ನೇ ಆರೋಪಿಗೆ ಬುದ್ದಿ ಹೇಳುತ್ತೇವೆ ಎಂದು ಹೇಳಿದ್ದರು. ಅದೇ ದಿನ ರಾತ್ರಿ 9.30 ಗಂಟೆಗೆ ಅವನು ಮತ್ತು ಅವರ ತಾಯಿ ಮನೆಯಲ್ಲಿದ್ದಾಗ 1 ನೇ ಆರೋಪಿ ಅವರ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ಹಾಗೂ ಇನ್ನೊಮ್ಮೆ ಇನಸ್ಟಾಗ್ರಾಂನಲ್ಲಿ ಪೋಟೋ ಹಾಕುತ್ತೇನೆ ಏನು ಮಾಡುತ್ತಿ ಮಾಡಿಕೋ ಎಂದಿರುತ್ತಾನೆ. ಆಗ ಅವರು ತಕ್ಷಣ ಹೋಗಿ ಪಿರ್ಯಾದನ್ನು ನೀಡಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.3 ಃ- ಪ್ರಾಸಾ.2- ಅಣ್ಣಪ್ಪ ಮಾದರ, ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿಕೊಂಡಿರುವುದೇನೆಂದರೆ, ಆರೋಪಿ 1 ಹಾಗೂ ಚಾಸಾ-1 ರವರು ಅವರಿಗೆ ಪರಿಚಯ. ದಿನಾಂಕಃ 15.09.2023 ರಂದು ಚಾಸಾ-1 ರ ಮನೆಯ ಮುಂದೆ ಅವರನ್ನು ಮತ್ತು ಚಾಸಾ- 3 ಇವರನ್ನು ಪೋಲಿಸರು ಕರೆಯಿಸಿ ಮಧ್ಯಾಹ್ನ 1.00 ರಿಂದ 2.00 ಗಂಟೆವರಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪಂಚನಾಮೆಯನ್ನು ನಿಪಿ. 2 ಅಂತಾ ಹಾಗೂ ಅದರ ಸಹಿಯನ್ನು ನಿಪಿ. 2 (ಬಿ) ಅಂತಾ ಗುರುತಿಸಿರುತ್ತಾರೆ. ನಿಪಿ. 3 ರಿಂದ 5 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.4ಃ- ಪ್ರಾಸಾ-3 ಯಲ್ಲಪ್ಪ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ಒಂದು ದಾಖಲೆ ನೋಡಿ, ಅದರ ಮೇಲಿನ ಸಹಿ ಅವರದ್ದೆ ಇದ್ದು ಅದನ್ನು ನಿಪಿ-7 ಅಂತಾ, ಅದರ ಮೇಲಿನ ಸಹಿಯನ್ನು ನಿಪಿ-7(ಎ) ಅಂತಾ ಗುರುತಿಸಲಾಯಿತು. ದಿನಾಂಕಃ 16-09-2023 ರಂದು ಡಿ.ವಾಯ್.ಎಸ್.ಪಿ ಕಚೇರಿ ಬಾಗಲಕೋಟೆಯಲ್ಲಿ ಸಂಜೆ 5.30 ರಿಂದ 6.30 ಗಂಟೆವರೆಗೆ ಮೊಬೈಲನ ಇನ್ಸಾಗ್ರಾಂನಲ್ಲಿ ಪೋಟೋಗಳನ್ನು ಚೆಕ್ ಮಾಡಿಸಿದರು. ಸದರಿ ಮೊಬೈಲ 1ನೇ ಆರೋಪಿಗೆ ಸೇರಿದ್ದು ಇರುತ್ತದೆ. ಸದರಿ ಮೊಬೈಲ ಎಂ.ಐ ಕಂಪನಿಗೆ ಸೇರಿದ್ದು ಇರುತ್ತದೆ. ಸದರಿ ಮೊಬೈಲ ವಶಪಡಿಸಿಕೊಳ್ಳುವಾಗ ಪೋಟೋ ತೆಗೆದಿದ್ದು ಅವುಗಳನ್ನು ನಿಪಿ-8 ಮತ್ತು 9 ಅಂತಾ ಗುರುತಿಸಲಾಯಿತು. ಆರೋಪಿತರು ಸದರಿ ಮೊಬೈಲನಲ್ಲಿ ನಾಗರಾಜ ಬೀಳಗಿ ಹಾಗೂ ರುಕ್ಮಿಣಿ ಪೋಟೋ ಹಾಕಿದ್ದರು. ಸದರಿ ಮೊಬೈಲ ನೋಡಿ ಮುಮಾ-1 ಅಂತಾ ಗುರುತಿಸಲಾಯಿತು. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2- ಸುಳ್ಳು

N.H Beesi
V.g. Nelagi

ಪ್ರಶ್ನೆ.5:- ಫ್ರಾಸಾ.4 ಗುರುರಾಜ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ದಿನಾಂಕಃ 26-09-2021 ರಂದು ಮಧ್ಯಾಹ್ನ 3.00 ಗಂಟೆಗೆ ಪೊಲೀಸರು ಸೈಬರ್ ಠಾಣೆಗೆ ಕರೆಯಿಸಿದ್ದರು. ನಾಗಾರಾಜನ ರೆಡ್ ಮೀ ಮೊಬೈಲನಲ್ಲಿನ ಡಾಟಾವನ್ನು ಡಿಲಿಟ್ ಮಾಡಿದರು ಹಾಗೂ ಪೋಟೋ ತೋರಿಸಿದರು ಹಾಗೂ ಒಂದು ಪೋಟೋ ತೆಗೆದರು. ಮೊಬೈಲನಲ್ಲಿ ರಿಟ್ರೈವ ಮಾಡಿದ ಪೋಟೋಗಳ ಪ್ರಿಂಟ್ ನೋಡಿ ಗುರುತಿಸಿದ್ದಾರೆ ಮೊಬೈಲ ನೋಡಿದಲ್ಲಿ ಗುರುತಿಸುತ್ತಾರೆ. ಅದನ್ನು ಮುಮಾ-2 ಅಂತಾ ಗುರುತಿಸಲಾಯಿತು. ಆ ಬಗ್ಗೆ ಪಂಚನಾಮೆ ಜರುಗಿಸಿದ್ದು ಅದನ್ನು ನಿಪಿ-10 ಅಂತಾ, ಅದರ ಮೇಲಿನ ಸಹಿಯನ್ನು ನಿಪಿ-10(ಎ) ಅಂತಾ ಗುರುತಿಸಲಾಯಿತು. ಪೋಟೋಗಳನ್ನು ನಿಪಿ-11,12 ಅಂತಾ ಗುರುತಿಸಲಾಯಿತು. ರಿಟ್ರೈವ್ ಮಾಡಿದ ಪೋಟೋ ಪ್ರತಿಯನ್ನು ನಿಪಿ-13 ಅಂತಾ ಗುರುತಿಸಲಾಯಿತು. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.6:- ಫ್ರಾಸಾ-5 ಈರಣ್ಣ ಹಾಗೂ ಫ್ರಾಸಾ-6 ಡೊಂಗ್ರಿಸಾಬ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊದಂಡಿರುವುದೇನೆಂದರೆ, ಒಂದು ದಾಖಲೆ ನೋಡಿದ್ದು ಅದರ ಮೇಲಿನ ಸಹಿ ಅವರದ್ದೆ ಇದ್ದು ಅದನ್ನು ನಿಪಿ-14 ಅಂತಾ, ಅದರ ಮೇಲಿನ ಸಹಿಯನ್ನು ನಿಪಿ-14(ಎ) ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು 2 ವರ್ಷಗಳ ಹಿಂದೆ ಎ.ಪಿ.ಎಂ.ಸಿ ಪೊಲೀಸ ಠಾಣೆಯಲ್ಲಿ ಮಾಡಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.7:- ಫ್ರಾಸಾ.7 ಗೋಪಾಲ ಲಮಾಣಿ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, 3 ತಿಂಗಳ ಹಿಂದೆ ಎ.ಪಿ.ಎಂ.ಸಿ ಪೊಲೀಸ ಠಾಣೆಗೆ ಅವರು ಹೋದಾಗ ನಿಪಿ-10 ಕ್ಕೆ ಸಹಿ ಪಡೆದ ಬಗ್ಗೆ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.8:- ಫ್ರಾಸಾ.8 ರುಕ್ಮವ್ವ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ಚಾಸಾ-1,14 ರಿಂದ 16 ಅವಳ ಅಣ್ಣಂದಿರು, ಚಾಸಾ -11 ಅವರ ತಾಯಿ ಹಾಗೂ ಚಾಸಾ -12 ಅವರ ಮಾವ. ದಿನಾಂಕ-16.03.2023 ರಂದು 1 ನೇ ಆರೋಪಿ ಅವಳ ಪೋಟೋವನ್ನು ಇನಸ್ಟಾಗ್ರಾಂನಲ್ಲಿ ಅಪಲೋಡ್ ಮಾಡಿರುತ್ತಾನೆ ಎಂದು ನುಡಿದಿರುತ್ತಾರೆ. ಸನ್ 2022-23 ನೇ ವಾರ್ಷಿಕ ಸಾಲಿನಲ್ಲಿ ತಾನು ಅಕ್ಕಮಹಾದೇವಿ ಸರಕಾರಿ ಪದವಿ ಕಾಲೇಜಿನಲ್ಲಿ ಬಿ.ಎ. 2 ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ 1 ನೇ ಆರೋಪಿ ಆತನ ತಂಗಿ ಸೃಷ್ಟಿ ಯಿಂದ ಪರಿಚಯ ಆಗಿದ್ದ, ಅವರು ಕೂಡ ನನ್ನ ಊರಿನವರೇ ಇದ್ದಾರೆ, ನಾನು ಪರಿಶಿಷ್ಟ ಜಾತಿಗೆ ಸೇರಿದವಳು, 1 ನೇ ಹಿಂದೂ ಲಿಂಗಾಯತ ಸಮೂದಾಯಕ್ಕೆ ಸೇರಿದವನು, ತಾನು ಕಾಲೇಜಿಗೆ ಹೋಗುವ ಸಮಯದಲ್ಲಿ ತನ್ನ ಅಣ್ಣ ಬಾಬು ಗಂಗಪ್ಪ ಅನಗವಾಡಿ ಇವರು

N H Bibasi
V.G. Nelagi

ಮೊಬೈಲನ್ನು ಬಳುಸುತ್ತಿದ್ದೆ. ಅದು ವಿವೋ ಕಂಪನಿಯ ಮೊಬೈಲ್ ಇದ್ದು ಏರ್ಟೆಲ್ ಸಿಮ್ ಸಂಖ್ಯೆ 8123821427 ಇತ್ತು, ನಾಗರಾಜ ತಂಗಿ ಹಾಗೂ ನಾನು ಸೆಲ್ಫಿಗಳನ್ನು ತೆಗೆದುಕೊಂಡಿದ್ದಾಗ ಆತನು ನಮ್ಮ ಜೊತೆಗೆ ನಿಂತಿದ್ದ ಅದನ್ನು ಆತನ ಇನ್ಸ್ಟಾಗ್ರಾಮ ಜಾತಲತಾಣದಲ್ಲಿ ಹರಿಬಿಟ್ಟಿದ್ದ, ಆ ರೀತಿ ದಿಃ 14.09.2023 ರಂದು ಹರಿಬಿಟ್ಟಿದ್ದ, ಅದು ನನಗೆ ರಾತ್ರಿ 9-30 ಕ್ಕೆ ನನ್ನ ಅಣ್ಣನ ಮುಖೇನ ತಿಳಿದು ಬಂದಿತ್ತು, ಅದೇ ರೀತಿ ನನ್ನ ಅಣ್ಣ ಈ ವಿಚಾರವನ್ನು ಮನೆಯಲ್ಲಿ ಹಾಗೂ ತಾಯಿಗೆ ಸಮಾಜದ ಹಿರಿಯರಿಗೆ ವಿಷಯ ತಿಳಿಸಿದ್ದ, ನಾವು ಅವರ ಮನೆಗೆ ಹೋಗಿ 1 ನೇ ಆರೋಪಿ ತಂದೆಗೆ ಆ ಕುರಿತು ವಿಷಯ ತಿಳಿಸಿದೆವು, ಅದಕ್ಕೆ ಅವರು ಬುದ್ಧಿ ಹೇಳುವುದಾಗಿ ತಿಳಿಸಿದರು. ಅದೇ ರಾತ್ರಿ 10-30 ಗಂಟೆಗೆ 1 ನೇ ಆರೋಪಿ ನಮ್ಮ ಮನೆಯ ಮುಂದೆ ಬಂದು ನನ್ನ ಅಣ್ಣನ ಕುರಿತು ಬಾಬ್ಯಾ ಸೂಳೆ ಮಗನೇ ಎಂದು ನಮಗೆ ಜಾತಿ ಹಿಡಿದು ಬೈದು ನಾನು ನಿಮ್ಮ ತಂಗಿಯ ಫೋಟೊ ಹಾಕಿರುವುದೇ ಸರಿ, ಏನು ಮಾಡುತ್ತಿಯಾ ಮಾಡಿಕೋ ಎಂದು ಬೈದ. ಆ ಕುರಿತು ನಾವು ಆ ರೀತಿ ಬೈಯಬೇಡ ಪೋಲಿಸರಿಗೆ ದೂರಬೇಕಾಗುತ್ತದೆ ಎಂದರೆ ಏನೂ ಮಾಡುತ್ತಿಯಾ ಮಾಡಿಕೋ ಎಂದು ಹೇಳಿದ. ನಮ್ಮ ಸಮಾಜದ ಮುಖಂಡರು ಬುದ್ದಿವಾದ ಹೇಳಿದರು ಕೇಳಿದೇ ಅಲ್ಲಿಂದ ಆರೋಪಿ ಹೊರಟ ಎಂದು ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 – ಸುಳ್ಳು

ಪ್ರಶ್ನೆ.9ಃ- ಪ್ರಾಸಾ.8 ರುಕ್ಮವ್ವ ಅವರು ಮುಂದುವರೆದು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ಆ ಕುರಿತು ದಿಃ 15.09.2023 ರಂದು ಬೀಳಗಿ ಪೋಲಿಸ್ ಠಾಣೆಯಲ್ಲಿ ನನ್ನ ಅಣ್ಣ ದೂರಿದ್ದಾನೆ. ನನ್ನನ್ನು ಪೋಲೀಸರು ವಿಚಾರಣೆ ಮಾಡಿದ್ದು ನಾನು ಹೇಳಿಕೆ ಕೊಟ್ಟಿದ್ದೇನೆ. ಸದರಿ ಇನ್ಸ್ಟಾಗ್ರಾಮನಲ್ಲಿ ಹಾಕಿರುವ ಫೋಟೊವನ್ನು ನೋಡಿ ಗುರುತಿಸಬಲ್ಲೆ, ನಾನು ಮೊಬೈಲ್ ಸಹ ಕೊಟ್ಟಿದ್ದೇನೆ. ಅವುಗಳನ್ನು ಈಗಾಗಲೇ ನ್ಯಾಯಾಲಯದಲ್ಲಿ ಹಾಜರಿಸಿದ್ದು, ನಿಪಿ-10, 13, 18, 36, 37, 39 ನೋಡಿ ಸಾಕ್ಷಿ ಗುರುತಿಸಿದ್ದು ಇದೆ. ಅದೇ ರೀತಿ ನ್ಯಾಯಾಲಯದಲ್ಲಿ ಜಮಾ ಮಾಡಿರುವ ಮೊಬೈಲ್ ನೋಡಿ ಹಾಗೂ ಅವುಗಳನ್ನು ಸಿಡಿಗೆ ಹಾಕಿರುವ ಬಗ್ಗೆ ಹಾಗೂ ಪೆನ್‌ಡ್ರೈವ್ ನೋಡಿ ಸಾಕ್ಷಿ ಗುರುತಿಸಿದ್ದು ಇದೆ. ನನ್ನಂತೆ ನಾಗರಾಜ ಬೀಳಗಿದು ಸಹ ಮೊಬೈಲ್ ಪೋಲೀಸರು ವಶಪಡಿಸಿಕೊಂಡಿದ್ದರು. ಸದರಿ ಆರ್ ಎಸ ಎಫ್ ಎಲ್ ನಿಂದ ಬಂದಿದ್ದು ಸಿಡಿ ಹಾಗೂ ಪೆನ್‌ಡ್ರೈವ್ ಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಅದೇ ರೀತಿ ಪೆನ್‌ಡ್ರೈವ ಹಾಗೂ ಸಿ ಡಿ ಯನ್ನು ಸಾಕ್ಷಿ ನೋಡಿದ್ದು ಅವುಗಳನ್ನು ಈಗಾಗಲೇ ನಿಪಿ-49, 50, 51, 52 ಎಂದು ಗುರುತಿಸಲಾಗಿದೆ. ನನ್ನನ್ನು ಪುನಃ 22.10.2023 ರಂದು ಪೋಲೀಸರು ಬಾಗಲಕೋಟೆ ಠಾಣೆಗೆ ಕರೆಸಿ ವಿಠ್ಠಲ ನಿಂಗಳ ಸಹ ಸ್ವತಃ ನಾನೇ 1 ನೇ ಆರೋಪಿಯ ಫೇಕ್ ಇನ್ಸ್ಟಾಮ ಅಕೌಂಟ ಮಾಡಿ ಫೋಟೋ ಅಪಲೋಡ ಮಾಡಿದ್ದು ಒಪ್ಪಿಕೊಂಡಿದು ಪೋಲೀಸರು ನಿಪಿ-48, 49 ಹಾಗೂ 50 ನನಗೆ ತೋರಿಸಿದ್ದು ಇದೆ. 2 ನೇ ಆರೋಪಿ ಪೋಲೀಸರ ಮುಂದೆ ನಿಪಿ-53 ರಂತೆ ಹೇಳಿಕೆ ಕೊಟ್ಟಿದ್ದ ಎಂದು ತಿಳಿದು ಬಂದಿದೆ. 2 ನೇ ಆರೋಪಿ ಪರಿಶಿಷ್ಟ ಪಂಗಡ ವಾಲ್ಮೀಕಿ ಜಾತಿಗೆ, ಬಿಲ್ ಕೆರೂರ ಸೇರಿದ್ದ ಬಗ್ಗೆ ನನಗೆ ತಿಳಿದು ಬಂದಿದ್ದು ಆ ಕುರಿತು 2 ನೇ ಆರೋಪಿ ಹೇಳಿಕೆ ಕೊಟ್ಟಿದ್ದನು ಎಂದು ಪೋಲೀಸರು ತಿಳಿಸಿರುತ್ತಾರೆ. ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಇದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

N.H Bulesi
V.g. Nelagi

ಪ್ರಶ್ನೆ.10ಃ- ಫ್ರಾಸಾ.9– ರೇಣುಕಾ ಮಾದರ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, 1 ನೇ ಆರೋಪಿ ಇನಸ್ಟಾಗ್ರಾಂನಲ್ಲಿ ಅವರ ಮಗಳ ಪೋಟೋವನ್ನು ಹಾಕಿರುತ್ತಾನೆ. ಆ ರೀತಿ ಪೋಟೋ ಹಾಕಿದ್ದು ಅವರ ಮಗನ ಪೋನ್ ನಲ್ಲಿ ಗೊತ್ತಾಗಿರುತ್ತದೆ. ಅವರ ಮಗ ಆರೋಪಿ 1 ರ ತಂದೆಗೆ ನಿಮ್ಮ ಮಗ ಪೋಟೋ ಹಾಕುತ್ತಿದ್ದಾನೆ ಆ ರೀತಿ ಮಾಡಬೇಡಿ ಎಂದು ತಿಳಿಸಿರುತ್ತಾರೆ. ಅವರುಗಳು ಕೋರಿದ ನಂತರ 15 ದಿವಸಗಳ ನಂತರ ಮತ್ತೇ ಪೋಟೋ ಅಪಲೋಡ್ ಮಾಡಿರುತ್ತಾನೆ. ಸುಮಾರು ಅದಾದ ನಂತರ ರಾತ್ರಿ 10.30 ಗಂಟೆಗೆ ಮನಗೆ ಹೋಗಿ ಅವರ ತಂದೆಗೆ ಹೋಗಿ ಹೇಳಿದ್ದಕ್ಕೆ ಅವಾಚ್ಯ ಶಬ್ದಗಳಿಂದ ಬೈದು ನಾನು ಮೋಬೈಲ್ನಲ್ಲಿ ಹಾಕುವವನೇ ಇದ್ದೇನೆ ಏನ ಮಾಡಿಕೊಳ್ಳುತ್ತೀರಿ ಮಾಡಿಕೊಳ್ಳಿ ಎಂದು ಹೇಳಿರುತ್ತಾನೆ. ಆ ಕುರಿತು ಅವರ ಮಗ ದೂರು ಕೊಟ್ಟಿರುತ್ತಾನೆ. ಇನ್ಸ್ಟಾಗ್ರಾಂ ನಲ್ಲಿ ಬಿಟ್ಟಿದ್ದ ಅವರ ಮಗಳ ಪೋಟೋ ನೋಡಿದರೆ ಅವರು ಗುರುತಿಸಿರುತ್ತಾರೆ. ನಿಪಿ 13 ರಲ್ಲಿ ಸಾಕ್ಷಿ ಅದರಲ್ಲಿ ಅವರ ಮಗಳು ಹಾಗೂ ನಾಗರಾಜ ಪೋಟೋ ಇರುವುದು ಕಂಡುಬರುತ್ತದೆ. ಸದರಿ ಮೊಬೈಲ್ನಿಂದ ಅಪಲೋಡ ಮಾಡಿರುವುದು 1 ನೇ ಆರೋಪಿ ಜೊತೆ 2 ನೇ ಆರೋಪಿ ಸೇರಿಕೊಂಡಿದ್ದಾನೆ. ಅವರಿಗೆ ಗೊತ್ತಾದ ಎಲ್ಲ ವಿಚಾರವನ್ನು ಪೋಲಿಸರಿಗೆ ಹೇಳಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

ಪ್ರಶ್ನೆ.11ಃ-ಫ್ರಾಸಾ.10– ಸೋಮಪ್ಪ ಚೂರಿ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ಸದರಿ ಬಾಬು ದೂರುದಾರ ಅವರ ಓಣೆಯಲ್ಲಿ ವಾಸವಿದ್ದಾನೆ. ಚಾಸಾ–11 ನಾಗರಾಜ ಹಾಗೂ ರುಕ್ಮವ್ವನ ಪೋಟೋ ಇನಸ್ಟಾಗ್ರಾಂನಲ್ಲಿ ಆರೋಪಿ ಹಾಕಿದ್ದರ ಬಗ್ಗೆ ಬಂದು ತಿಳಿಸಿದ್ದಳು, ಸದರಿ ಇನ್ಸ್ಟಾಗ್ರಾಂ ಅಕೌಂಟ್ ನಾಗರಾಜನ ಹೆಸರಿನಲ್ಲಿತ್ತು. ಆ ಕುರಿತು ಪೋಟೋ ನೋಡಿರುತ್ತಾರೆ. ಸದರಿ ಪೋಟೋಗಳನ್ನು ಹಾಕಿರುವ ಬಗ್ಗೆ ಸ್ವಲ್ಪ ಬುದ್ದಿವಾದ ಹೇಳಿ ಎಂದು ಕೇಳಿರುತ್ತಾರೆ. ಅವರು, ಕೃಷ್ಣಾ, ನಾಗರಾಜ ಹಿರಿಯರಿಗೆ ಕುರಿತು, ಊರಿನ ಪ್ರಮುಖರ ಎದುರು ಬುದ್ದಿವಾದ ಹೇಳಿದ್ದು, ನಾಗರಾಜನ ತಂದೆ ಇರಲಿಲ್ಲ, ಚಿಕ್ಕಪ್ಪನನ್ನು ಕರೆಸಿದ್ದೇವು. ಆ ರೀತಿ ಮಾಡದೇ ಇರಲು ಅವರು ತಾಕೀತು ಮಾಡಿರುತ್ತಾರೆ. ಸದರಿ ನಾಗರಾಜ ಅದು ನಾನು ಹಾಕಿದ್ದಲ್ಲ ಅದನ್ನು ಬೇರೆಯವರು ಹ್ಯಾಕ ಮಾಡಿ ಬಂದಿದೆ ಎಂದು ಆಗ ಹೇಳಿದ್ದು, ಅದಾದ ನಂತರ ಪುನಃ ದಿಃ 14.09.2023 ರಂದು ಪೋಟೋ ಬಂದಿರುತ್ತದೆ. ಅಂದು ಚಾಸಾ–1 ದೂರಿದ್ದು, ಆತನ ತಾಯಿ ಪುನಃ ಚಾಸಾ–1 ಹಾಗೂ ಚಾಸಾ–11 ನಾಗರಾಜ ಮನೆಗೆ ಹೋಗಿ ಹೇಳಿದ್ದು, ಆಗ ನಾಗರಾಜ ಇರಲಿಲ್ಲ. ನಾಗರಾಜನ ತಂದೆ ಆಯಿತು ಎಂದು ಕಳುಹಿಸಿದ್ದರು. ಸದರಿ ನಾಗರಾಜನನ್ನು ಆತನ ತಂದೆ ಬೈಯ್ಯುದಂತೆ ಪುನಃ ನಾಗರಾಜ ಜಗಳ ಮಾಡಿ ಬೈದಿದ್ದಾನೆ ಎಂದು ನನ್ನ ಬಳಿ ಚಾಸಾ–11 ರೇಣುಕಾ ಹೇಳಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 – ಸುಳ್ಳು

N.H Bilesi
V.g Nelugi

ಪ್ರಶ್ನೆ.12ಃ- ಫ್ರಾಸಾ.11– ಗುರುರಾಜ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ದಿನಾಂಕಃ 07.10.2023 ರಂದು ನಿಪಿ–22 ರಂತೆ ಡಿ.ವಾಯ್.ಎಸ್.ಪಿ ಬಾಗಲಕೋಟೆ ರವರ ಕೋರಿಕೆಯನ್ನು ಪಡೆದುಕೊಂಡಿದ್ದು ಅದರಂತೆ ದಿನಾಂಕಃ 25.10.2023 ರಂದು ಅನಗವಾಡಿಯ ಸಿಮೆಂಟ ರಸ್ತೆ ಇದ್ದು ಪೊಲೀಸ ಸಿಬ್ಬಂದಿ ಸದಾಶಿವ ದಳವಾಯಿ ತೋರಿಸಿದ ಜಾಗಕ್ಕೆ ಭೇಟಿ ನೀಡಿ ಹಸ್ತ ನಕಾಶೆಯನ್ನು ತಯಾರಿಸಿರುತ್ತೇನೆ. ಅದನ್ನು ನೋಡಿದ್ದು ಅದನ್ನು ನಿಪಿ–23 ಎಂದು ಸಾಕ್ಷಿಯ ಸಹಿಯನ್ನು ನಿಪಿ–23(ಎ) ಎಂದು ಗುರುತಿಸಲಾಗಿರುತ್ತದೆ. ಆ ಕುರಿತು ವರದಿಯನ್ನು ನಕಾಶೆಯೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದನ್ನು ಈಗ ನೋಡಿದ್ದು ಅದನ್ನು ನಿಪಿ–24 ಎಂದು ಸಾಕ್ಷಿಯ ಸಹಿಯನ್ನು ನಿಪಿ–24(ಎ) ಎಂದು ಗುರುತಿಸಲಾಗಿರುತ್ತದೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.13ಃ- ಫ್ರಾಸಾ.12 ಪಾಂಡು ಮಾದರ ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ನ್ಯಾಯಾಲಯದಲ್ಲಿ ಗುರುತಿಸಲ್ಪಟ್ಟಿರುವ ನಿಪಿ- 13 ನ್ನು ಸಾಕ್ಷಿ ನೋಡಿದ್ದು ಅದರಲ್ಲಿ ಕಂಡು ಬರುವ ಹುಡುಗಿ ರುಕ್ಮವ್ವ ಇದ್ದಾಳೆ, ಸದರಿ ಛಾಯಾಚಿತ್ರ ಪರಸ್ಪನೊಂದಿಗೆ ತೆಗೆದುಕೊಂಡಿದ್ದು ಇದೆ, ಎರಡು ವರ್ಷದ ಹಿಂದೆ ಆ ಕುರಿತು ರುಕ್ಮವ್ವ ರವರ ಮನೆಯ ಮುಂದೆ ಗಲಾಟೆ ಆಗಿತ್ತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.14ಃ- ಫ್ರಾಸಾ.13 ಬಸಪ್ಪ ಮಾದರ ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ನ್ಯಾಯಾಲಯದ ಮುಂದೆ ಇರುವ ನಾಗರಾಜ ಗೊತ್ತು, ರೇಣುಕಾ ಗೊತ್ತು, ನ್ಯಾಯಾಲಯದಲ್ಲಿ ಗುರುತಿಸಲ್ಪಟ್ಟಿರುವ ನಿಪಿ– 13 ನ್ನು ಸಾಕ್ಷಿ ನೋಡಿದ್ದು ಅದರಲ್ಲಿ ಕಂಡು ಬರುವ ಹುಡುಗಿ ರುಕ್ಮವ್ವ ನನ್ನ ಪಕ್ಕದ ಮನೆಯಲ್ಲಿ ಇದ್ದಾಳೆ, ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು

ಆ-2 - ಸುಳ್ಳು

ಪ್ರಶ್ನೆ.15ಃ- ಫ್ರಾಸಾ.14– ಕಾಶಿನಾಥ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ಆರೋಪಿ–2 ಬ್ಯಾಂಕಗೆ ಹೋಗಿ ಬಂದು ಮಾಡುತ್ತಿದ್ದ ಹಾಗಾಗಿ ಅವನು ಅವರಿಗೆ ಚೆನ್ನಾಗಿ ಗೊತ್ತು. ಈಗ ತೋರಿಸಿದ ಜೆಯೋ ಸಿಮ್ ನಾನೇ ಪಡೆದುಕೊಂಡಿದ್ದೇ ಅದರ ಅರ್ಜಿ ನೋಡಿದ್ದು ಅದನ್ನು ನಿಪಿ–31 ಎಂದು ಗುರುತಿಸಲಾಗಿರುತ್ತದೆ. ಆ ಕುರಿತು ಆಧಾರ ಇದೆ ಅದನ್ನು ನಿಪಿ–32 ಎಂದು ಗುರುತಿಸಲಾಗಿರುತ್ತದೆ. ಸದರಿ ಸಿಮ್ ನ್ನು ಅವರು ಪಡೆದುಕೊಂಡು ನ್ಯಾಯಾಲಯದ ಮುಂದೆ ಇರುವ ವಿಠ್ಠಲನಿಗೆ ಕೊಟ್ಟಿರುತ್ತಾರೆ . ಸದರಿ ಸಿಮ್ ಪ್ರಿಪೇಡ್ ಇತ್ತು. ಸದರಿ ಸಿಮನ್ನು ಆರೋಪಿಗೆ ಕೊಟ್ಟ ಬಗ್ಗೆ ಪೊಲೀಸರು ಅವರನ್ನು ವಿಚಾರಿಸಿದ್ದು ಆ ಕುರಿತು ಹೇಳಿರುತ್ತಾರೆ. ಸದರಿ ಸಿಮ್ ಬಳಸಿ ಆರೋಪಿ ಏನು ಮಾಡಿದ್ದಾನೆ ಅವರಿಗೆ ಗೊತ್ತಿಲ್ಲ. ಸದರಿ ಸಿಮ್ ದುರ್ಬಳಕೆಯಾಗಿದೆ ಎಂದು ಹೇಳಿದ್ದರು. ಪೊಲೀಸರು ನನ್ನನ್ನು ಕರೆಸಿ ವಿಚಾರಣೆ ಮಾಡಿದ್ದಾರೆ. ಈಗ ತೋರಿಸಿದ ದಾಖಲೆಯಲ್ಲಿ ಅವರ ಸಹಿ ಇದ್ದು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ–33 ಎಂದು ಸಾಕ್ಷಿಯ ಸಹಿಯನ್ನು ನಿಪಿ–33(ಎ) ಎಂದು ಗುರುತಿಸಲಾಗಿರುತ್ತದೆ. ಅವರು ಪೊಲೀಸರು ವಿಚಾರಣೆ ಮಾಡಿದಾಗ ಸಿಮ್ ಸಂಖ್ಯೆ ನನಗೆ ನೀಡಿದ್ದು 7676000802 ಎಂದು ಮಾಹಿತಿ ಕೊಟ್ಟಿರುತ್ತಾರೆ . ಅದನ್ನು ವಿಠ್ಠಲ ಕೊಂಡಾಗಿನಿಂದ

N.H.Bues.
v.g.Melagi

ಬಳಸುತ್ತಿದ್ದಾನೆಂದು ಹೇಳಿರುತ್ತಾರೆ. ಈಗ ತೋರಿಸಿದ ಇನ್ನೊಂದು ದಾಖಲೆ ನೋಡಿದ್ದು ಅದನ್ನು ಅವರೇ ಬರೆದುಕೊಟ್ಟಿದ್ದೇನೆ. ಅದನ್ನು ನಿಪಿ–34 ಎಂದು ಸಾಕ್ಷಿಯ ಸಹಿಯನ್ನು ನಿಪಿ–34(ಎ) ಎಂದು ಗುರುತಿಸಿರುತ್ತಾರೆ. ನಿಪಿ–34 ರಲ್ಲಿ ಬರೆದಿರುವ ವಿಚಾರ ಪೊಲೀಸರು ತಿಳಿಸಿದಂತೆ ಬರೆದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

ಪ್ರಶ್ನೆ.16ಃ-ಪ್ರಾಸಾ.15– ಎಂ. ನಾಗರೆಡ್ಡಿ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ದಿನಾಂಕಃ 26.09.2023 ರಂದು ಉಪ ಅಧೀಕ್ಷಕರು ಬಾಗಲಕೋಟೆ ಇವರ ಕೋರಿಕೆ ಪತ್ರವನ್ನು ಸ್ವೀಕರಿಸಿದ್ದು ಅದನ್ನು ನಿಪಿ–35, ಸಾಕ್ಷಿಯ ಸಹಿಯನ್ನು ನಿಪಿ–35(ಎ) ಎಂದು ಗುರುತಿಸಲಾಯಿತು. ಅದೇ ದಿನ ಅವ ಸಿಬ್ಬಂದಿ ಇವರ ಆದೇಶದಂತೆ ಮಾಹಿತಿಯನ್ನು ಪರಿಶೀಲನೆ ಮಾಡಿರುತ್ತಾರೆ. ನಿಪಿ–13 ರಂತೆ ಸೆಲಬ್ರೆಟ್ ಡಾಟಕಾಂ ನಲ್ಲಿ ಮೊಬೈಲನಲ್ಲಿ ಇದ್ದ ಮಾಹಿತಿಯನ್ನು ಹೊರತೆಗೆದು ಡೌನಲೋಡ ಮಾಡಿ ಆ ಕುರಿತು ಪ್ರಿಂಟ ಹಾಕಿ ಆ ಕುರಿತು ಪೆನಡ್ರೈವಗೆ ಅಳವಡಿಸಿ ಪೊಲೀಸ ಉಪ ಅಧೀಕ್ಷಕರಿಗೆ ನಿಯಮಾನುಸಾರ ಸಲ್ಲಿಸಿರುತ್ತಾರೆ. ನಿಪಿ–13 ಕ್ಕೆ ಸಂಬಂದಪಟ್ಟಂತೆ ಪೆನಡ್ರೈವಗಳಲ್ಲಿ ಅದನ್ನು ಡೌನಲೋಡ ಮಾಡಿ ನ್ಯಾಯಾಲಯಕ್ಕೆ ಶೀಲ್ ಮಾಡಿ ನಿಯಮಾನುಸಾರ ತನಿಖಾಧಿಕಾರಿ ಸಲ್ಲಿಸಿದ್ದನ್ನು ನೋಡಿದ್ದು ಅವುಗಳನ್ನು ನಿಪಿ–36 ಮತ್ತು 37 ಎಂದು ಕ್ರಮವಾಗಿ ಗುರುತಿಸಲಾಯಿತು. ನಂತರ ದಿನಾಂಕಃ 21.10.2023 ರಂದು ಇನ್ನೊಬ್ಬ ಆರೋಪಿಗೆ ಸಂಬಂದಪಟ್ಟಂತೆ ಮೊಬೈಲನಲ್ಲಿ ಇರುವ ವಿಷಯವನ್ನು extract ಮಾಡಿ ಕಳುಹಿಸಿಕೊಟ್ಟಿದ್ದು. ದಿಃ 21.10.2023 ರ ಪತ್ರವನ್ನು ಈಗ ನೋಡಿದ್ದು ಅದನ್ನು ನಿಪಿ–38 ಎಂದು ಸಾಕ್ಷಿಯ ಸಹಿಯನ್ನು ನಿಪಿ–38(ಎ) ಎಂದು ಗುರುತಿಸಲಾಗಿರುತ್ತದೆ . ನಿಪಿ–35, 38 ಕ್ಕೆ ಸಂಬಂಪಟ್ಟಂತೆ ಅದೇ ದಿನ ಪೆನಡ್ರೈವ ನಿಪಿ–36 ಮತ್ತು 37 ನ್ನು ನೀಡಿದ ಬಗ್ಗೆ ಪತ್ರ ಬರೆದು ತನಿಖಾಧಿಕಾರಿಗೆ ಕೊಟ್ಟ ಬಗ್ಗೆ ನೋಡಿದ್ದು ಅದನ್ನು ನಿಪಿ–39 ಎಂದು ಸಾಕ್ಷಿಯ ಸಹಿಯನ್ನು ನಿಪಿ–39(ಎ) ಎಂದು ಗುರುತಿಸಲಾಗಿರುತ್ತದೆ . ನಿಪಿ–35, 38 ಕ್ಕೆ ಸಂಬಂಪಟ್ಟಂತೆ ಪೆನಡ್ರೈವ ಅಳವಡಿಸಿ ನಿಪಿ–13 ನ್ನು ಕಳುಹಿಸಿಕೊಟ್ಟಿದ್ದೇನೆ. ಅದೇ ದಿನ ದಿಃ 21.10.2023 ರಂದು ತನಿಖಾಧಿಕಾರಿ ಕೋರಿಕೆ ಅನ್ವಯ ನಿಪಿ–13 ರಂತೆ ಮಾಹಿತಿ ಕೊಟ್ಟ ಪತ್ರವನ್ನು ನಿಪಿ–40 ಎಂದು ಸಾಕ್ಷಿಯ ಸಹಿಯನ್ನು ನಿಪಿ–40(ಎ) ಎಂದು ಗುರುತಿಸಲಾಗಿರುತ್ತದೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

ಪ್ರಶ್ನೆ.17ಃ-ಪ್ರಾಸಾ.16–ಗಂಗಪ್ಪ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ದಿಃ 15.09.2023 ರಂದು ಘಟನಾ ಸ್ಥಳಕ್ಕೆ ಪಂಚನಾಮೆ ಕಾಲದಲ್ಲಿ ಹಾಜರಿದ್ದು ಅವರ ಮೊಬೈಲನಲ್ಲಿ ಪೋಟೋ ತೆಗೆದಿರುತ್ತಾರೆ . ಅವುಗಳನ್ನು ಈಗಾಗಲೇ ನಿಪಿ–3 ರಿಂದ 5 ಎಂದು ಗುರುತಿಸಲಾಗಿದೆ. ದಿಃ 16.09.2023 ರಂದು ಎರಡು ಛಾಯಾಚಿತ್ರಗಳನ್ನು ಒಟ್ಟಾಗಿ ನಿಪಿ–10 ರಂತೆ ಅವರೇ ತೆಗೆದಿರುತ್ತಾರೆ. ದಿಃ 26.09.2023 ರಂದು ನಿಪಿ–8 ಹಾಗೂ 9 ರಂತೆ ಛಾಯಾಚಿತ್ರ ತೆಗೆದಿದ್ದೇನೆ. ದಿಃ 21.10.2023 ರಂದು ಆರೋಪಿ–1 ಅವರ ಮೊಬೈಲ ವಶಪಡಿಸಿಕೊಂಡ ಬಗ್ಗೆ ಛಾಯಾಚಿತ್ರ ತೆಗೆದಿದ್ದು ಅದನ್ನು ಈಗ ನೋಡಿದ್ದು ಅದನ್ನು ಈಗಾಗಲೇ ನಿಪಿ–15 ರಿಂದ 18 ಎಂದು ಗುರುತಿಸಲಾಗಿದೆ. ಆ

N H Bijsi
V.g Meleegi

ಕುರಿತು ಶಪಥಪತ್ರವನ್ನು ನೀಡಿದ್ದು, ಈಗ ನೋಡಿದ್ದು ಅದನ್ನು ನಿಪಿ-41 ಎಂದು ಸಾಕ್ಷಿಯ ಸಹಿಯನ್ನು ನಿಪಿ-41(ಎ) ಎಂದು ಗುರುತಿಸಲಾಯಿತು. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

ಪ್ರಶ್ನೆ.18ಃ-ಫ್ರಾಸಾ.17-ಮಹಾಂತೇಶ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ದಿನಾಂಕಃ 26.09.2023 ರಂದು ಅವರು ಕರ್ತವ್ಯದ ಮೇಲೆ ಇದ್ದಂತೆ ಬಾಗಲಕೋಟೆಯಲ್ಲಿ ತನಿಖೆಗೆ ಜೊತೆಗೆ ಹೋದಾಗ ಮೊಬೈಲ ಡಾಟಾವನ್ನು ರಿಟ್ರೈವ ಮಾಡಲು ಆದೇಶಿಸಿದ್ದು, ಸೆನ್ ಪೊಲೀಸ ಠಾಣೆಯಲ್ಲಿ ಆ ಕುರಿತು ಮಾಹಿತಿ ಕಲೆ ಹಾಕಲು ತೆಗೆದುಕೊಂಡು ಹೋಗಿ ಕೊಟ್ಟಿದ್ದು. ಆ ಕುರಿತು ಪಂಚನಾಮೆ ಸಹ ಮಾಡಿದ್ದಾರೆ, ದಿನಾಂಕಃ 08.10.2023 ರಂದು ಬೀಳಗಿ ನಾಗರಾಜ ಎನ್ನುವ ಇನ್ಸ್ಟಾಗ್ರಾಮನ ಐಪಿ ಅಡ್ರೆಸ್ ಸಂಗ್ರಹಿಸಿ ಅವರು ತನಿಖಾಧಿಕಾರಿಗೆ ವಹಿಸಿಕೊಟ್ಟಿದ್ದರು. ಪುನಃ ದಿಃ 15.10.2023 ರಂದು 7676000802 ಮೊಬೈಲ ನಂಬರಿನ ಸಿಡಿಆರ್ ಮಾಹಿತಿ ತನಿಖಾಧಿಕಾರಿ ನಿರ್ದೇಶನದಂತೆ ಅವರೇ ಡೌನಲೋಡ ಮಾಡಿದ್ದು. ಸದರಿ ಸಿಡಿಆರ್ ನ್ನು ನೋಡಿದ್ದು ಅದನ್ನು ನಿಪಿ-43 ಎಂದು ಗುರುತಿದ್ದು. ದಿಃ 21.10.2023 ರಂದು ಮೊಬೈಲ ಜಪ್ತು ಪಂಚನಾಮೆ ಹಾಗೂ ರಿಟ್ರೈವ ಪಂಚನಾಮೆ ನಿಪಿ-14 ರಂತೆ ಅವರೇ ಕಛೇರಿಯಲ್ಲಿ ಜಪ್ತು ಮಾಡಿದ್ದು ಸೆನ್ ಪೊಲೀಸ ಠಾಣೆಯಲ್ಲಿ ಆ ಕುರಿತು ರಿಟ್ರೈವ ಮಾಡಿದ್ದು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಿದ್ದು, ಆ ಕುರಿತು ಛಾಯಾಚಿತ್ರ ತೆಗೆಯಲಾಗಿದೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

ಪ್ರಶ್ನೆ.19ಃ-ಫ್ರಾಸಾ.18-ಪಂಪನಗೌಡ ಅವರು ತಮ್ಮ ಸಾಕ್ಷದಲ್ಲಿ ಹೇಳಿಕೊಂಡಿರುವುದೇನೆಂದರೆ, ದಿನಾಂಕಃ 15.09.2023 ರಂದು ಎಸ್.ಪಿ ಬಾಗಲಕೋಟೆ ರವರ ಆದೇಶದನ್ವಯ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡಿದ್ದು ಅದನ್ನು ನಿಪಿ-45, ನಿಪಿ-46 ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ನಿಪಿ-2 ರಂತೆ ಸ್ಥಳ ಮಹಜರ ನಿಯಮಾನುಸಾರ ದಾಖಲಿಸಿಕೊಂಡಿದ್ದು, ಆ ಸಮಯದಲ್ಲಿ ಪಂಚರ ಸಮಕ್ಷಮವೇ ಕಚ್ಚಾ ನಕಾಶೆ ತಯಾರು ಮಾಡಿದ್ದು, ಸಾಕ್ಷಿಗಳಾದ ಚಾಸಾ-10 ರಿಂದ 16 ರವರು ಹೇಳಿಕೆಗಳನ್ನು ಅವರು ವಿವರಿಸಿದಂತೆ ದಾಖಲಿಸಿಕೊಂಡಿದ್ದಾರೆ. ದಿಃ 16.09.2023 ರಂದು ದೂರುದಾರಳು ಹಾಜರಾಗಿ ಒಂದು ಛಾಯಾಚಿತ್ರ ಚಾಸಾ-10 ಮತ್ತು 1 ನೇ ಆರೋಪಿ ಜೊತೆಯಾಗಿ ಕಂಡುಬರುವ ಇನ್ಸ್ಟಾಗ್ರಾಮ ಚಿತ್ರವನ್ನು ಅವರಿಗೆ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿದ್ದಾರೆ, ಅದನ್ನು ನಿಪಿ-48 ಎಂದು, ಸಾಕ್ಷಿಯ ಸಹಿಯನ್ನು ನಿಪಿ-48(ಎ) ಎಂದು ಗುರುತಿಸಲಾಯಿತು. ಆ ಕುರಿತು ದೂರುದಾರಳು ಪುರವಣಿ ಹೇಳಿಕೆ ಮತ್ತು ಲಿಖಿತ ಪತ್ರವನ್ನು ಸಹ ನೀಡಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

N.H. Billagi
V.G. Melagi

ಪ್ರಶ್ನೆ20:–ಫ್ರಾಸಾ.18–ಪಂಪನಗೌಡ ಅವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಹೇಳಿಕೊಂಡಿರುವುದೇನೆಂದರೆ, ಸಿಬ್ಬಂದಿಯನ್ನು ಆರೋಪಿ ಪತ್ತೆಗಾಗಿ ನಿಯೋಜಿಸಿದ್ದು ದಿಃ 16.09.2023 ರಂದು ಅವರು ಮುಂದೆ ತಂದು ಹಾಜರು ಪಡಿಸಿದ್ದು ಆತನನ್ನು ವಿಚಾರಣೆಗೆ ಒಳಪಡಿಸಿ ದಸ್ತಗೀರಿ ಕ್ರಮ ಅನುಸರಿಸಿ ಚಾಸಾ–4 ಹಾಗೂ 5 ರ ಸಮಕ್ಷಮ ಪಂಚನಾಮೆ ಅಡಿ ಆರೋಪಿಯ ಮೊಬೈಲ ವಶಪಡಿಸಿಕೊಂಡಿದ್ದು ಇದೆ. ಮೊಬೈಲ ಐಎಂಇಐ ನಂ. 861181040723062 ಹಾಗೂ 861181040723070 ನಿಪಿ–10 ರಲ್ಲಿ ವಶಪಡಿಸಿಕೊಂಡಿದ್ದರಲ್ಲಿ ಕಂಡು ಬರುತ್ತಿದೆ. ಸದರಿ ಮೊಬೈಲ ನ್ಯಾಯಾಲಯದಲ್ಲಿ ಜಮಾ ಆಗಿದ್ದು ಅದನ್ನು ಈಗಾಗಲೇ ಮುದ್ದೆಮಾಲು–1 ಎಂದು ಗುರುತಿಸಿದ್ದು ಇದೆ. ಅದನ್ನು ನ್ಯಾಯಾಲಯದ ಅನುಮತಿ ಪಡೆದು ತನಿಖೆಗೆ ಇರಿಸಿಕೊಂಡಿದ್ದಾರೆ. ಆರೋಪಿಗೆ ದಸ್ತಗೀರಿ ಕ್ರಮ ವಹಿಸಿದ್ದ ಮೆಟಾಪ್ಲಾಟಪಾರ್ಮನವರಿಗೆ ಸದರಿ ಇನ್ಸಾಗ್ರಾಮ ಬಳಕೆದಾರರು ಯಾರು ಎಂದು ಮಾಹಿತಿ ಪೂರೈಸಲು ಪತ್ರ ಬರೆದಿದ್ದು, ಆ ಕುರಿತು ವರದಿ ಬಂದಿದೆ, ದಿಃ 26.09.2023 ರಂದು ಸೆನ್ ಪೊಲೀಸ ಠಾಣೆಗೆ ಭೇಟಿ ನೀಡಿ ಡಾಟಾ ರಿಟ್ರೀವ್ ಮಾಡಲು ಕೋರಿಕೆ ಸಲ್ಲಿಸಿದ್ದು, ಆ ಕುರಿತು ಪೆನಡ್ರೈವ ನ್ಯಾಯಾಲಯದಲ್ಲಿ ಜಮಾ ಮಾಡಿದ್ದು ಅವುಗಳನ್ನು ನಿಪಿ–36, 37 ಎಂದು ಗುರುತಿಸಲಾಗಿದೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃಆ-1 - ಸುಳ್ಳು
ಆ-2 - ಸುಳ್ಳು

ಪ್ರಶ್ನೆ21:–ಫ್ರಾಸಾ.18–ಪಂಪನಗೌಡ ಅವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಹೇಳಿಕೊಂಡಿರುವುದೇನೆಂದರೆ, ದಿನಾಂಕಃ 07.10.2023 ರಂದು ತಹಶೀಲ್ದಾರ ಬೀಳಗಿ ರವರಿಗೆ ದೂರುದಾರಳು ಹಾಗೂ ಆರೋಪಿ–1 ರ ಜಾತಿ ವರದಿ ನೀಡಲು ಕೋರಿಕೆ ಸಲ್ಲಿಸಿದ್ದು, ನಿಪಿ–20 ರಂತೆ ವರದಿಯನ್ನು ಸಹ ಪಡೆದಿದು ದಿಃ 08.10.2023 ರಂದು ನಿಪಿ–49 ರಂತೆ ಆ ಕುರಿತು ವರದಿ ಪಡೆದಿದ್ದಾರೆ. ನೋಡಲ್ ಅಧಿಕಾರಿಗಳಿಗೆ ಸೀಮ್ ಯಾರು ಬಳಸುತ್ತಿದ್ದಾರೆಂದು ತಿಳಿಯಲು ಪತ್ರ ಬರೆದಿದ್ದು ಆ ಕುರಿತು ವರದಿ ಬಂದಿದೆ. ಸದರಿ ಜಿಯೋ ಸಿಮ್ ನಂ.7676000802 ಯಾರ ಹೆಸರಿನಲ್ಲಿ ಇದೆ ಎನ್ನುವ ಬಗ್ಗೆ ನೋಡಲ್ ಅಧಿಕಾರಿಗಳಿಗೆ, ಸಿಡಿಆರ್, ಎಸ್.ಬಿ.ಆರ್ ಇದರ ಬಗ್ಗೆ ಮಾಹಿತಿ ನೀಡಲು ಕೋರಿಕೆ ಸಲ್ಲಿಸಿದ್ದರು. ದಿಃ 21.10.2023 ರಂದು ಸದರಿ ಕಾಶಿನಾಥ ರವರನ್ನು ವಿಚಾರಣೆಗೆ ಸಹ ಒಳಪಡಿಸಿದ್ದು, ಸದರಿ ವ್ಯಕ್ತಿ 2019 ರಲ್ಲಿ ಅದನ್ನು ಖರೀದಿ ಮಾಡಿ ವಿಠ್ಠಲ ಎನ್ನುವ ಸ್ನೇಹಿತನಿಗೆ ನೀಡಿದ್ದಾಗಿ ತಿಳಿಸಿದ್ದ. ಆರೋಪಿ ಮೊಬೈಲ ಹಾಜರು ಪಡಿಸಿದ್ದು ಚಾಸಾ–8, 9 ರ ಸಮಕ್ಷಮ ವಶಕ್ಕೆ ಪಡೆದುಕೊಂಡಿದ್ದಾರೆ. ಪುನಃ ಸೆನ್ ಪೊಲೀಸ ಠಾಣೆಗೆ ಭೇಟಿ ನೀಡಿದ್ದು ಇದೆ. ನಿಪಿ–14 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ–14(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–1 ರವರ ಮರು ಹೇಳಿಕೆ ಪಡೆದಿದ್ದು, ಅದೇ ದಿನ ಚಾಸಾ–26 ರವರ ಕಲಂ–65(ಬಿ) ಆಪಥಪತ್ರ ಪಡೆದಿದ್ದಾರ. ದಿಃ 27.10.2023 ರಂದು 2 ನೇ ಆರೋಪಿಯ ಮೊಬೈಲ ವಶಪಡಿಸಿಕೊಂಡಿದ್ದರ ಎಫ್.ಎಸ್.ಎಲ್ ವರದಿ ನೀಡಲು ಕಳುಹಿಸಿದ್ದು ಇದೆ. ಆ ಕುರಿತು ಅವರ ತನಿಖೆ ಪೂರ್ಣಗೊಳಿಸಿದ ನಂತರ ವರದಿ ಪಡೆದಿದ್ದಾರೆ.ನಂತರ ತನಿಖೆ ಪೂರ್ಣಗೊಳಿಸಿ ಅವರು ದೋಷಾರೋಪಣೆ ಸಲ್ಲಿಸಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ ಆ-1 - ಸುಳ್ಳು
ಆ-2 - ಸುಳ್ಳು

N.H Bilgi
V.g. Nelagi

ಪ್ರಶ್ನೆ.22 ಃ- ನಿಮಗೆ ಬೇರೆ ಏನಾದರೂ ಹೇಳುವುದು ಇದೆಯೇ ?

ಉತ್ತರ ಆ-1 - ಇಲ್ಲ
ಆ-2 - ಇಲ್ಲ

ಪ್ರಶ್ನೆ.23 ಃ- ನಿಮ್ಮ ಪರವಾಗಿ ಸಾಕ್ಷ್ಯವನ್ನು ಮಾಡಿಸುತ್ತೀರಾ ?

ಉತ್ತರ ಆ-1 - ಇಲ್ಲ
ಆ-2 - ಇಲ್ಲ

ಆರೋಪಿತರು ನ್ಯಾಯಾಲಯಕ್ಕೆ ಹೇಳಲು ಬಯಸಿದ್ದೇನೆಂದರೆ ಪಿರ್ಯಾದಿದಾರರು ನಮ್ಮ ಮೇಲೆ ಸುಳ್ಳು ಕೇಸ ಹಾಕಿದ್ದಾರೆ, ಆ ಕಾರಣದಿಂದ ಮೊಕದ್ದಮೆ ನಮಗೆ ಖುಲಾಸೆ ಮಾಡುವ ಮುಖಾಂತರ ಕೊನೆಗೊಳಿಸಬೇಕೇಂದು ನ್ಯಾಯಾಲಯಕ್ಕೆ ನೀವೆದಿಸಿಕೊಂಡಿರುತ್ತಾರೆ.

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು/ಅವಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ).

Kmujjar 5/6/26

ದಿಃ05.06.2026 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
(ವಿಶೇಷ ನ್ಯಾಯಾಧೀಶರು) ಬಾಗಲಕೋಟೆ.***

N.H. Bulagi
V.G. Melagi